# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉತ್ತರ ಕನ್ನಡ , ಕಾರವಾರ

## Spl.C No. 72/2019

ಫಿರ್ಯಾದಿ – ಸರ್ಕಾರ – ಕುಮಟಾ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ – ಹರ್ಷ ತಂದೆ ಕಮಲಾಕರ ನಾಯ್ಕ ಮತ್ತು ಇತರರು

## ದೋಷಾರೋಪಣೆ

ಶ್ರೀ ಸಿ.ರಾಜಶೇಖರ, ಬಿ.ಕಾಂ. ಎಲ್.ಎಲ್.ಬಿ., ಪ್ರಧಾನ ಜಿಲ್ಲಾ ಮತ್ತು ನ್ಯಾಯಾಧೀಶರು, ಉತ್ತರ ಕನ್ನಡ , ಕಾರವಾರ ಆದ ನಾನು

1. ಹರ್ಷ ತಂದೆ ಕಮಲಾಕರ ನಾಯ್ಕ
   ಪ್ರಾಯಃ 20 ವರ್ಷ,
   ಸಾಃ ಚಿಟ್ಟೆಕಂಬಿ, ಹೆಗಡೆ ಗ್ರಾಮ, ತಾಃ ಕುಮಟಾ
2. ಚಂದನ್ ತಂದೆ ಸೀತಾರಾಮ್ ನಾಯ್ಕ
   ಪ್ರಾಯಃ 21 ವರ್ಷ,
   ಸಾಃ ಚಿಟ್ಟೆಕಂಬಿ, ಹೆಗಡೆ ಗ್ರಾಮ, ತಾಃ ಕುಮಟಾ
3. ಗಜಾನನ ತಂದೆ ಕಮಲಾಕರ ನಾಯ್ಕ
   ಪ್ರಾಯಃ 23 ವರ್ಷ,
   ಸಾಃ ಚಿಟ್ಟೆಕಂಬಿ, ಹೆಗಡೆ ಗ್ರಾಮ, ತಾಃ ಕುಮಟಾ
4. ಕಮಲಾಕರ ತಂದೆ ನಿಂಗಪ್ಪಾ ಯಾನೆ ಲಿಂಗಪ್ಪ ನಾಯ್ಕ
   ಪ್ರಾಯಃ 50 ವರ್ಷ,
   ಸಾಃ ಚಿಟ್ಟೆಕಂಬಿ, ಹೆಗಡೆ ಗ್ರಾಮ, ತಾಃ ಕುಮಟಾ

ನಿಮ್ಮ ವಿರುದ್ಧ ಆಪಾದಿಸುವುದೇನೆಂದರೆಃ

ದಿನಾಂಕಃ 29.05.2019 ರಂದು 19.30 ಗಂಟೆ ಸಮಯಕ್ಕೆ ಕುಮಟಾ ಪೋಲೀಸ್ ಠಾಣೆಯ ಸರಹದ್ದಿನಲ್ಲಿ ಬರುವ ಕುಮಟಾ ತಾಲೂಕಿನ ಹೆಗಡೆ ಗ್ರಾಮದ ಚಿಟ್ಟಿಕಂಬಿಯಲ್ಲಿ ಚಾಸಾ.10 ಸೀತಾರಾಮ ನಾಯ್ಕ ಇವರಿಗೆ ಸೇರಿದ್ದ ಅಂಗಡಿಯ ಎದುರಿನ ಸಾರ್ವಜನಿಕ ರಸ್ತೆಯ ಬದಿಯಲ್ಲಿ, 1 ರಿಂದ 3 ನೇ ಆರೋಪಿಗಳಾದ ನೀವು ಏಕೋದ್ದೇಶದಿಂದ ಸಂಗನಮತ ಮಾಡಿಕೊಂಡು ಬಂದು ಫಿರ್ಯಾದಿ ಚಾಸಾ .1 ಮಹಾದೇವ ಮುಕ್ರಿ ಇವರು ಪರಿಶಿಷ್ಟ ಜಾತಿಗೆ ಸೇರಿದವರು ಎಂದು ತಿಳಿದಿದ್ದರೂ ಚಾಸಾ .1 ರವರನ್ನು ಉದ್ದೇಶಿಸಿ "ಸರಾಯಿ ಮಾರಾಟ ಮಾಡದಂತೆ ನಿಮ್ಮ ಮುಕ್ರಿ ಜಾತಿಯವರು ಎಷ್ಟು ಅರ್ಜಿ ಮಾಡಿದರೂ ಪ್ರಯೋಜನ ಇಲ್ಲ" ಎಂದು ಹೇಳಿ ಚಾಸಾ.1 ರವರಿಗೆ ಮಾತಿಗೆ ಎಳೆದು ಮುಂದೆ ಹೊಗದಂತೆ ಅಡ್ಡಗಟ್ಟಿ ತಡೆದು ಅಕ್ರಮವಾಗಿ ಪ್ರತಿಬಂಧಿಸುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ ಕಲಂ 34 ರ ಮೇರೆಗೆ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ .

ಎರಡನೆಯದಾಗಿ ಮೇಲೆ ಹೇಳಿದ ದಿನ, ಸ್ಥಳ ಹಾಗೂ ವೇಳೆಯಂದು 1 ರಿಂದ 3 ನೇ ಆರೋಪಿಗಳಾದ ನೀವು ನಿಮ್ಮ ಉದ್ದೇಶದ ಮುಂದುವರಿಕೆಯಲ್ಲಿ ಫಿರ್ಯಾದಿ ಚಾಸಾ.1 ರವರಿಗೆ ಶಾಂತಿಭಂಗ ಮಾಡುವ ಉದ್ದೇಶದಿಂದ "ಕೀಳು ಮುಕ್ರಿ ಜಾತಿಯವ ಬೋಳಿಮಗ, ಸೂಳೆಮಗ" ಎಂದು ಅವಾಚ್ಯ ಶಬ್ದಗಳಿಂದ ಬೈದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುವಿರಿ.

ಮೂರನೆಯದಾಗಿ ಮೇಲೆ ಹೇಳಿದ ದಿನ, ಸ್ಥಳ ಹಾಗೂ ವೇಳೆಯಂದು 1 ರಿಂದ 3 ನೇ ಆರೋಪಿಗಳಾದ ನೀವು ನಿಮ್ಮ ಉದ್ದೇಶದ ಮುಂದುವರಿಕೆಯಲ್ಲಿ ಫಿರ್ಯಾದಿ ಚಾಸಾ.1 ರವರಿಗೆ ಅವಾಚ್ಯವಾಗಿ ಬೈದಿದ್ದಲ್ಲದೇ ಕೈಯಿಂದ ಹೊಡೆದಿರಿ ಮತ್ತು ತಪ್ಪಿಸಲು ಬಂದ ಫಿರ್ಯಾದಿಯ ಹೆಂಡತಿ ಚಾಸಾ.4 ಶ್ರೀಮತಿ ಮಹಾದೇವಿ ಮತ್ತು ಮಗ ಚಾಸಾ .5 ಮೇಘರಾಜ ರವರಿಗೂ ಕೈಯಿಂದ ಹೊಡೆದು ದೂಡಾಡಿ ನೋವು ಪಡಿಸಿ ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ .

ನಾಲ್ಕನೆಯದಾಗಿ ಮೇಲೆ ಹೇಳಿದ ದಿನ, ಸ್ಥಳ ದಲ್ಲಿ ರಾತ್ರಿ 21.00 ಗಂಟೆಗೆ 1 ರಿಂದ 4 ನೇ ಆರೋಪಿಗಳಾದ ನೀವು ಮನೆಗೆ ಹೋಗುತ್ತಿದ್ದ ಫಿರ್ಯಾದಿ ಚಾಸಾ .1 ರವರ ಹೆಂಡತಿ ಚಾಸಾ.4 ಮಹಾದೇವಿ ಮತ್ತು ಮಗ ಚಾಸಾ.5 ಮೇಘರಾಜ ಇವರಿಗೆ ಅಡ್ಡಗಟ್ಟಿ ಫಿರಾದಿಯ ಹೆಂಡತಿ ಚಾಸಾ.5 ರವರ ಸೀರೆಯನ್ನು ಹಿಡಿದು ಎಳೆದಾಡಿ ಆಕೆಯ ಮಾನಕ್ಕೆ ಭಂಗಉಂಟು ಮಾಡಿ ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 354(ಎ) ಸಹವಾಚಕ ಕಲಂ 34 ರನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುವಿರಿ.

ಐದನೆಯದಾಗಿ, ಮೇಲೆ ಹೇಳಿದ ದಿನ ಸ್ಥಳದಲ್ಲಿ 1 ರಿಂದ 4 ನೇ ಆರೋಪಿಗಳಾದ ನೀವು ಏಕೋದ್ದೇಶದಿಂದ ಸಂಗನಮತ ಮಾಡಿಕೊಂಡು ನಿಮ್ಮ ಉದ್ದೇಶದ ಮುಂದುವರಿಕೆಯಲ್ಲಿ ಫಿರ್ಯಾದಿ ಚಾಸಾ.1, ಅವರ ಹೆಂಡತಿ ಚಾಸಾ.4 ಮತ್ತು ಮಗ ಚಾಸಾ.5 ರವರಿಗೆ ಜೀವದ ಬೆದರಿಕೆ ಹಾಕಿ ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರನ್ವಯ ದಂಡನೀಯವಾದ ಅಪರಾಧವನ್ನು ಈ ವಿಶೇಷ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ .

ಕೊನೆಯದಾಗಿ, ಆರೋಪಿಯಾದ ನೀವು ಫಿರ್ಯಾದಿ ಚಾಸಾ .1 ಇವರು ಪರಿಶಿಷ್ಟ ಜಾತಿಗೆ ಸೇರಿದವರೆಂದು ತಿಳಿದಿದ್ದರೂ ಕೂಡ ಅವರ ಜಾತಿಯ ಹೆಸರಿನಲ್ಲಿ ಅವರಿಗೆ "ನೀನು ಹರಿಜನ ನೀನು ಕರಿಯಾ, ನಿನ್ನ ಮುಟ್ಟಿದರೆ ಸ್ನಾನ ಮಾಡಬೇಕು , ನನಗೆ ಬುದ್ಧಿ ಹೇಳಲು ಬರಬೇಡ ದೂರ ನಿಲ್ಲು" ಅಂತ ಸಾರ್ವಜನಿಕ ಸ್ಥಳದಲ್ಲಿ ಜಾತಿ ನಿಂದನೆ ಮಾಡಿ ತನ್ಮೂಲಕ ಕಲಂ 3(1) (R), 3(1) (S), 3(1) (W), (2), 3(2) (VA) ಎಸ್.ಸಿ/ಎಸ್.ಟಿ (ಪ್ರಿವೆನಶನ್ ಆಫ್ ಅಟ್ರೊಸಿಟೀಸ್) ಆಕ್ಟ್ 2015 ರನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ .

ಸದರಿ ಆರೋಪದ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 06 ನೇ ಸಪ್ಟೆಂಬರ 2021.

(ಸಿ.ರಾಜಶೇಖರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ .